ದಿನಾಂಕ: 30-11-2011 ರಂತೆ ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದಲ್ಲಿ 8ನೇ ಘಟಕವನ್ನು ಹೊರತುಪಡಿಸಿ ಎಲ್ಲಾ ಘಟಕಗಳೂ ಕಾರ್ಯಾನಿರ್ವಹಿಸುತ್ತಿವೆ 8ನೇ ಘಟಕವನ್ನು ಸಧ್ಯದಲ್ಲಿಯೇ ಚಾಲನೆಗೊಳಿಸಲಾಗುವುದು.

ವಸತಿ ಯೋಜನೆಯಡಿ ನಿರ್ಮಿಸಿದ ಮನೆಗಳು

203 (337) ಶ್ರೀ ಪಾಟೀಲ್ ವಿ.ಎಸ್ (ಯಲ್ಲಾಪುರ):- ಮಾನ್ಯ ವಸತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಉತ್ತರ ಕನ್ನಡ ಜಿಲ್ಲೆ ಮುಂಡಗೋಡ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ವಸತಿ ಯೋಜನೆ ಅಡಿ ಮಂಜೂರಾತಿ ಪಡೆದ ಫಲಾನುಭವಿಗಳ ವಿವರ ನೀಡುವುದು?

ಶ್ರೀ ವಿ. ಸೋಮಣ್ಣ (ಮಾನ್ಯ ವಸತಿ ಸಚಿವರು):-

ಅ) <u>ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ:</u>

ಉತ್ತರ ಕನ್ನಡ ಜಿಲ್ಲೆಯಲ್ಲಿ ಬರುವ ಮುಂಡಗೋಡ ತಾಲ್ಲೂಕಿನಲ್ಲಿ ವಿವಿಧ ವಸತಿ ಯೋಜನೆಯಡಿ 2008-09, 2009-10, 2010-11ನೇ ವರ್ಷದಲ್ಲಿ ಒಟ್ಟು 1968 ಮನೆಗಳನ್ನು ಮಂಜೂರು ಮಾಡಲಾಗಿದೆ. ಯೋಜನಾವಾರು ಹಾಗೂ ವರ್ಷಾವಾರು ವಿವರಗಳನ್ನು ಈ ಕೆಳಗೆ ನೀಡಲಾಗಿದ್ದು, ಫಲಾನುಭವಿಗಳ ವಿವರಗಳನ್ನು ಅನುಬಂಧ 'ಅ', 'ಆ', 'ಇ', 'ಈ', ಮತ್ತು 'ಉ' ಗಳಲ್ಲಿ ಲಗತ್ತಿಸಿದೆ.

ಯೋಜನೆ	ವಿವಿಧ ಸಾಲಿನಲ್ಲಿ ನೀಡಲಾಗಿರುವ ಮನೆಗಳು				ಅನುಬಂಧ
	08-09	09-10	10-11	ಒಟ್ಟು	
ಗ್ರಾಮೀಣ ಆಶ್ರಯ	256	-	-	256	'ಅ'
ಬಸವ ವಸತಿ ಯೋಜನೆ	-	-	757	757	'ಆ'
ಗ್ರಾಮೀಣ ಅಂಬೇಡ್ಕರ್	13	-	-	13	'ಇ'
ವಿಶೇಷ ವರ್ಗದ ಯೋಜನೆ (ಅಲೆಮಾರಿ ಜನಾಂಗ)	-	-	6	6	'ಈ'
ಇಂದಿರಾ ಆವಾಸ್ ಯೋಜನೆ	434	502	-	936	'ಉ'
ಒಟ್ಟು	**703**	**502**	**763**	**1968**	

ಕರ್ನಾಟಕ ಗೃಹ ಮಂಡಳಿ:

ಕರ್ನಾಟಕ ಗೃಹ ಮಂಡಳಿ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ಉತ್ತರ ಕನ್ನಡ ಜಿಲ್ಲೆ ಮುಂಡಗೋಡ ಬಡಾವಣೆಯಲ್ಲಿ 100 ವಸತಿ ಯೋಜನೆ ಹಾಗೂ ಹಳೆಯ ವಸತಿ ಯೋಜನೆಯಡಿಯಲ್ಲಿ 20 ಫಲಾನುಭವಿಗಳಿಗೆ ಮನೆ/ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಸದರಿ ಫಲಾನುಭವಿಗಳ ವಿವರವನ್ನು ಅನುಬಂಧ 'ಊ' ರಲ್ಲಿ ಲಗತ್ತಿಸಿದೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ:

ಮಂಡಳಿ ವತಿಯಿಂದ ಮುಂಡಗೋಡ ಪುರಸಭಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವುದೇ ವಸತಿ ಯೋಜನೆ ಮಂಜೂರಾತಿ ಆಗಿರುವುದಿಲ್ಲ.

ಹಾಸನದ ಪೊಲೀಸ್ ಟ್ರಾಫಿಕ್ ಸಬ್‌ಇನ್ಸ್‌ಪೆಕ್ಟರ್

204 (520) ಶ್ರೀ ಹೆಚ್.ಎಸ್. ಪ್ರಕಾಶ್ (ಹಾಸನ):– ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಹಾಸನ ನಗರದ ಟ್ರಾಫಿಕ್ ಸಬ್ ಇನ್ಸ್‌ಪೆಕ್ಟರ್ ರವರು ಬಜರಂಗ ದಳದ ಹೆಸರಿನಲ್ಲಿ ಸಾರ್ವಜನಿಕರಿಂದ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು):–

ಅ) ಹೌದು

ಆ) ಪೊಲೀಸ್ ಅಧೀಕ್ಷಕರು, ಹಾಸನ ಜಿಲ್ಲೆರವರು ಸದರಿಯವರ ವಿರುದ್ಧ ಕೆ.ಎಸ್.ಪಿ. (ಡಿ.ಪಿ) ನಿಯಮಾವಳಿಗಳು 1965ರ ನಿಯಮ 7ರ ಅಡಿಯಲ್ಲಿ ಶಿಸ್ತು ಕ್ರಮ ಜರುಗಿಸಿ, ಅವರ ನಡವಳಿ ಆದೇಶ ಸಂಖ್ಯೆ: ಸಿಬ್ಬಂದಿ(1)/ಪಿಆರ್–24/2011–12, ದಿನಾಂಕ: 25–06–2011 ರಲ್ಲಿ "ಛೀಮಾರಿ" ಶಿಕ್ಷೆ ವಿಧಿಸಲಾಗಿತ್ತು. ಆದರೆ, ಹಾಲಿ ಶ್ರೀ ಕೆ. ಪ್ರಶಾಂತ್, ಪಿಎಸ್‌ಐ ರವರು ಎಸಗಿರುವ ಲೋಪವು ಅತ್ಯಂತ ತೀವ್ರತರವಾಗಿರುವುದಾಗಿ ಕಂಡುಬಂದಿರುವುದರಿಂದ, ಸದರಿಯವರ ವಿರುದ್ಧ ದಿನಾಂಕ: 25–06–2011 ರಂದು